ಕಾಪು ಪೋಲೀಸ್ ಸಿಬ್ಬಂದಿ ವರ್ಗಕ್ಕೂ ಸಹ ವಸತಿ ಸೌಕರ್ಯವನ್ನು ಹಂತ ಹಂತದ ಯೋಜನೆಯಲ್ಲಿ ಒದಗಿಸಲಾಗುವುದು.

೯) ಸಿಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಅನೇಕ ಕೊಳವೆ ಬಾವಿಗಳು ವಿಫಲವಾಗಿರುವ ಬಗ್ಗೆ,

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಸಿಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ೧೯೮೩ ರಿಂದ ಈವರೆಗೆ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳನ್ನು ತೆಗೆಸಿದ್ದು, ಅವುಗಳಲ್ಲಿ ಅನೇಕ ಬಾವಿಗಳು ವಿಫಲವಾಗಿದ್ದು, ಜನತೆಗೆ ಯಾವುದೇ ರೀತಿಯಲ್ಲಿ ಉಪಯೋಗವಾಗಿರುವುದಿಲ್ಲ. ಆದ್ದರಿಂದ ಈ ವರೆಗೆ ಮೇಲ್ಕಂಡ ೨ ತಾಲ್ಲೂಕುಗಳಲ್ಲಿ ತೆಗೆಸಿರುವ ಬಾವಿಗಳ ಸಂಖ್ಯೆ ಹಾಗೂ ವಿಫಲವಾಗಿರುವ ಬಾವಿಗಳ ಸಂಖ್ಯೆಯನ್ನು ಈ ಸದನಕ್ಕೆ ತಿಳಿಸುವುದಲ್ಲದೆ, ಕುಡಿಯುವ ನೀರಿಗಾಗಿ ಕೈಗೊಂಡಿರುವ ಪರ್ಯಾಯ ಕಾರ್ಯಕ್ರಮವನ್ನು ತಿಳಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

೧೦) ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಇರುವ ಸಮಸ್ಯೆಗಳನ್ನು ನಿವಾರಣೆ ಮಾಡುವುದು.

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗೆ ಪ್ರಾರಂಭದಿಂದಲೇ ಬಹಳಷ್ಟು ಬಾಲಾರಿಷ್ಟ ನಿಗದಿತ ವೇಳೆಗೆ ಕಟ್ಟಡ ಪೂರ್ಣವಾಗದೆ, ಕಾರ್ಖಾನೆ ಆರಂಭ ವಿಳಂಬವಾಯಿತು. ಇತ್ತೀಚಿನ ಎರಡು ವರ್ಷಗಳಲ್ಲಿ ಕಬ್ಬು ಬೆಳೆಸಲು ರೈತರು ಬಹಳಷ್ಟು ಆಸಕ್ತಿ ತೋರಿಸುತ್ತಿದ್ದರೂ, ಈ ಕುರಿತು ಇಲಾಖೆಯ ಕ್ರಮಬದ್ಧ ಕಾರ್ಯಕ್ರಮವಿಲ್ಲ, ಚಿಕ್ಕ ನೀರಾವರಿಯ ಹೊಸ ಯೋಜನೆ ಇಲ್ಲ, ಇರುವ ಕಿರು ಅಣೆಕಟ್ಟುಗಳ ದುರಸ್ತಿ ಇಲ್ಲ. "ವಾರಾಹಿ ಯೋಜನೆ" ಕುರಿತು ಕೇಳಿ ಕೇಳಿ ಕನಸಿನ ಗಂಟಾಗುತ್ತಿದೆಯೇ ಎಂಬ ಅನುಮಾನ ರೈತರಲ್ಲಿ ಮೂಡಿದೆ, ಕಬ್ಬು ಅರೆಯಲು ಕೂಡಾ ಕಾರ್ಖಾನೆಗೆ ಬೇಕಾದಷ್ಟು ನೀರು ಪೂರೈಕೆ ಇಲ್ಲ. ಆಗಾಗ ಉಂಟಾಗುವ ಯಾಂತ್ರಿಕ ತೊಂದರೆ, ನೀರು ಹೊಟ್ಟಿಯ ಸೋರುವಿಕೆ ಇತ್ಯಾದಿಗಳಿಂದ ಮತ್ತಷ್ಟು ಭಾದೆ. ಕಷ್ಟಪಟ್ಟು ಕಬ್ಬು ಬೆಳೆಸಿ, ಕಾರ್ಖಾನೆಗೆ ಪೂರೈಸಿದ ರೈತರಿಗೆ ಸಕಾಲದಲ್ಲಿ ಬೆಲೆ ಪಾವತಿ ಇಲ್ಲ. ಹಣಕಾಸಿನ ಸಮಸ್ಯೆ, ಕೆಲಸ ಮಾಡುತ್ತಿರುವ ನೌಕರರಿಗೆ ಉದ್ಯೋಗ ಭದ್ರತೆ ಇಲ್ಲ. ಎಲ್ಲಕ್ಕೂ ಹೆಚ್ಚಾಗಿ ಕಬ್ಬು ಅರೆಯುವ ಸೀಸನ್‌ನಲ್ಲಿ ಅಧ್ಯಕ್ಷರು ವಿದೇಶದಲ್ಲಿ ವ್ಯವಸ್ಥಾಪಕ ನಿರ್ದೇಶಕರಿಗೆ ವರ್ಗಾವಣೆ, ಅನೇಕ ತಿಂಗಳುಗಳಾದರೂ ಇನ್ನೂ ಮ್ಯಾನೇಜಿಂಗ್ ಡೈರೆಕ್ಟರರೆ ನೇಮಕವಾಗಿಲ್ಲ. ಈ ಎಲ್ಲ ಸಮಸ್ಯೆಗಳ ನಿವಾರಣೆ ಇನ್ನಾದರೂ ಕೂಡಲೇ ಕ್ರಮ ತೆಗೆದುಕೊಳ್ಳಿ ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಬಿ. ಪೋತ್‌ದಾರ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವರಾಜ್‌ರವರು ಏನು ಹೇಳಿದ್ದಾರೆ, ಅದರಲ್ಲಿ ಸತ್ಯಾಂಶ ಇದೆ. ಈ ವಿಷಯವನ್ನು ನಾನು ಕ್ಯಾಬಿನೆಟ್ ಸಬ್-ಕಮಿಟಿಯಲ್ಲಿ ಇಟ್ಟಿದ್ದೇನೆ. ಇದರ ಬಗ್ಗೆ ಬೇಗನೆ ತೀರ್ಮಾನವನ್ನು ಕೈಗೊಳ್ಳುವರಿದ್ದೇವೆ ಮತ್ತೆ ಅಲ್ಲಿ ರೆಗ್ಯುಲರ್ ಎಂ.ಡಿ. ಅವರನ್ನು ಅಪಾಯಿಂಟ್ ಮಾಡಿದ್ದೇವೆ. ಮತ್ತು ಇತರೆ ಗ್ರಿವೆನ್‌ಸಸ್ ಹೇಳಿದ್ದಾರೆ, ಇದರ ಬಗ್ಗೆ ಡೈರೆಕ್ಟರ್ ಆಫ್ ಷುಗರ್ ಅವರಿಗೆ ರಿಕ್ವೆಸ್ಟ್ ಮಾಡಿಕೊಂಡು ಗಮನ ಹರಿಸುವುದಕ್ಕೆ ಹೇಳಿದ್ದೇವೆ. ಒಟ್ಟಿನಲ್ಲಿ ಅಲ್ಲಿರುವ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ,